# ವಾರ್ಡ್ ನಂ: 83 ಕಾಡುಗುಡಿ ವಾರ್ಡ್‌ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 10/06/2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

**ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಶ್ರೀಮತಿ. ಲಕ್ಷ್ಮಿ, ಕಿರಿಯ ಆರೋಗ್ಯ ನಿರೀಕ್ಷಕರು, ಬಿಬಿಎಂಪಿ, ಕಾಡುಗುಡಿ ವಾರ್ಡ್ ನಂ.83
4. ಡಾ॥ ಕಂತರಾಜು, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
5. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್‌ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
6. ಶ್ರೀ.ಅಂಜಿನಪ್ಪ, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ.
7. ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ
8. ಶ್ರೀ.ನಾಗರಾಜ್, ಜೆ.ಇ. ಬೆಸ್ಕಾಂ
9. ಶ್ರೀ.ಶಶಿಧರ್, ಸ.ಕಾ.ಅ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
10. ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
11. ಶ್ರೀ.ಮುನಿರಾಜು, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಟ್ರಾಫೀಕ್ ಪೋಲೀಸ್-ವರ್ತೂರು
12. ಶ್ರೀ.ರವಿ ಕುಮಾರ್, ಎ.ಇ, ಬಿ.ಬಡ್ಲ್ಯೂ.ಎಸ್.ಎಸ್.ಬಿ
13. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ
14. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ಎಸ್.ಮಾರಪ್ಪ | 19. ಸಂಪಂಗಿ |
| 2. ಗೋಪಾಲ್-ಗುಟ್ಟಾ | 20. ಗವಾಸ್ಕರ್ ನಾಯ್ಕ್ |
| 3. ಡಾ॥ ಸಾಯಿ ಕೀರ್ತಿ | 21. ಸುಮನ್ ಸೇನಾಪತಿ |
| 4. ಪುರುಷೋತಮ್ | 22. ರವಿ-ಗುಟ್ಟ |
| 5. ಜಗದೀಶ್ | 23. ವಿನೋದ್‌ಕುಮಾರ್ ಜಗದೀಶ್ವರಿ |
| 6. ಸಂದ್ಯಾ ಪ್ರಕಾಶ್ | 24. ಮುನಿಲಕ್ಷ್ಮಿ |
| 7. ಪತಾಂಜಲಿ | 25. ಅನಿತ |
| 8. ಹರ್ಷ | 26. ಮಂಜುಳ |
| 9. ಭಾಗ್ಯ | 27. ಆನಂದ್ ಕುಮಾರ್ |
| 10. ಶಿವಕುಮಾರ್ ಪಾಟೀಲ್ | 28. ಗೌತಮ್ ಮಿತ್ರ |
| 11. ವೆಂಕಟೇಶ್‌ಗೌಡ | 29. ಎನ್.ಎಂ.ಗೋಪಾಲ್ |
| 12. ನಾಗರಾಜ್‌ರೆಡ್ಡಿ | 30. ದಿಲೀಪ್ |
| 13. ಹನುಮಾನ ಬಾಬು | 31. ಪ್ರಮೀಳ |
| 14. ರವಿ-ಕೇಬಲ್ | 32. ಉಮೇಶ್ |
| 15. ಮುನೀಂದ್ರ | 33. ರಮೇಶ್ ಬಾಬು |
| 16. ಸರ್ವಣ | 34. ಧರಣಿ |
| 17. ಇಂದಿರಾ | 35. ಪ್ರಶಾಂತ್.ಕೆ.ವಿ |
| 18. ಶ್ರೀಧರ್ | 36. ಸುರ್ದಶನ್ ರೆಡ್ಡಿ |
| | 37. ವಿಜೀಕುಮಾರ್, ದಿನ್ನೂರು |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು



Scanned with CamScanner

ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಎಸ್.ವಿ ರಸ್ತೆಯ ಸಾರ್ವಜನಿಕರು ರಸ್ತೆಯಲ್ಲಿ ರಾತ್ರಿಯ ಸಮಯದಲ್ಲಿ ಓಡಾಡಲು ಬಯದ ವಾತವರಣ ಇರುವುದರಿಂದ ನಮಗೆ ಪೋಲೀಸ್ ರಕ್ಷಣೆಯನ್ನು ಒದಗಿಸಲು ಕೋರಿದರು

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವೈಟ್‌ಫೀಲ್ಡ್ ಪೋಲೀಸ್ ಅಧಿಕಾರಿಗಳು ಎಸ್.ವಿ ರಸ್ತೆ ಮತ್ತು ಇತರೆ ಅಡ್ಡರಸ್ತೆಗಳಲ್ಲಿ ಅವಶ್ಯಕತೆ ಇದ್ದಲ್ಲಿ 2-3 ಬಾರಿ ಪೋಲೀಸ್ ಬಿಟ್‌ನ್ನು ಕೈಗೊಳ್ಳುವುದಾಗಿ ತಿಳಿಸಿದರು

3. ಸಭೆಯಲ್ಲಿ ಶ್ರೀ.ಮುನಿಂದ್ರ, ದಿನ್ನೂರು ರವರು ಕಾಡುಗುಡಿ ರೈಲ್ವೆ ರಸ್ತೆಯಲ್ಲಿ ರಸ್ತೆ ಗುಂಡಿಗಳು ಹೆಚ್ಚು ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದ್ದು, ಹಾಗೂ ಈಗಾಗಲೇ ಹಿಂದಿನ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದು, ಆದರೆ ಇಲ್ಲಿಯವರೆಗೂ ಯಾವುದೇ ರಸ್ತೆ ಗುಂಡಿಗಳನ್ನು ಮುಚ್ಚಿರುವುದಿಲ್ಲವೆಂದು ತಿಳಿಸಿ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದರು.

   ಸದರಿ ವಿಷಯಕ್ಕೆ ಶ್ರೀ.ರವಿ, ಸಹಾಯಕ ಅಭಿಯಂತರರು, ರ.ಮೂ.ಸೌ ರವರು ಸದರಿ ರಸ್ತೆಯ ಕಾಮಗಾರಿಯು ಪ್ರಗತಿಯಲ್ಲಿದ್ದು, ಶೀಘ್ರವಾಗಿ ರಸ್ತೆ ಗುಂಡಿಗಳನ್ನು ಮುಚ್ಚುವುದಾಗಿ ತಿಳಿಸಿದರು

4. ಸಭೆಯಲ್ಲಿ ಶ್ರೀ.ಪ್ರಶಾಂತ್ ರವರು ಪಟಾಲಮ್ಮ ಬಡಾವಣೆಯ ರಸ್ತೆಗಳಲ್ಲಿ ಎಲ್.ಇ.ಡಿ ಲೈಟ್‌ಗಳನ್ನು ಅಳವಡಿಸಬೇಕೆಂದು ಕೋರಿದರು.

   ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಪ್ರಸ್ತಾವಣೆಯು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ಸಭೆಯಲ್ಲಿ ಶ್ರೀ.ಮಾರಪ್ಪ, ಮತ್ತು ಶ್ರೀ.ರವಿ ಅಂಬೇಡ್ಕರ್‌ಗುಟ್ಟ ರವರು ಸ್ಟಾರ್ ಮಾರುಕಟ್ಟೆಯಿಂದ ವಿಜಯನಗರ ರಸ್ತೆಯ ವರೆಗೂ ರಸ್ತೆಯು ಹದಗೇಟ್ಟಿದ್ದು, ಶೀಘ್ರವಾಗಿ ರಸ್ತೆ ಗುಂಡಿಗಳನ್ನು ಮುಚ್ಚಿ ಹಾಗೂ ಪೂರ್ಣ ರಸ್ತೆಯ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಬೇಕೆಂದು ಕೋರಿದರು.

   ಸದರಿ ವಿಷಯಕ್ಕೆ ಶ್ರೀ.ರವಿ, ಸಹಾಯಕ ಅಭಿಯಂತರರು, ರ.ಮೂ.ಸೌ ರವರು ಪ್ರಸ್ತುತ ರಸ್ತೆಗಳ ಗುಂಡಿಗಳಿಗೆ ವೇಟ್‌ಮೀಕ್ಸ್ ಹಾಕಲಾಗಿದ್ದು, ಮಳೆಯು ನಿಂತ ನಂತರ Asphalt ಕಾಮಗಾರಿನ್ನು ಕೈಗೊಳ್ಳುವುದಾಗಿ ಹಾಗೂ ಮುಂದಿನ ದಿನಗಳಲ್ಲಿ ರಸ್ತೆಯ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದರು

6. ಸಭೆಯಲ್ಲಿ ಶ್ರೀ.ಕೃಷ್ಣಮೂರ್ತಿ ರವರು ಈಗಾಗಲೇ ಚನ್ನಸಂದ್ರದಲ್ಲಿ ಬೋರ್‌ವೆಲ್‌ಗಳನ್ನು ಕೊರಿಸಿದ್ದು, ಪ್ರಸ್ತುತ ನೀರಿನ ಅಭಾವವು ಹೆಚ್ಚು ಇರುವುದರಿಂದ ಕೋರಿಸಿರುವ ಬೋರ್‌ವೆಲ್‌ಗೆ ಮೋಟರ್, ಪೈಪ್ ಮತ್ತು ಕೇಬಲ್‌ಗಳನ್ನು ಅಳವಡಿಸಬೇಕೆಂದು ಕೋರಿದರು.

   ಸದರಿ ವಿಷಯಕ್ಕೆ ಶ್ರೀ.ವೆಂಕಟೇಶ್ ಸಹಾಯಕ ಅಭಿಯಂತರರು, ರವರು ಗುತ್ತಿಗೆದಾರರಿಗೆ ತಿಳಿಸಿ ಶೀಘ್ರವಾಗಿ ಅಳವಡಿಸುವುದಾಗಿ ತಿಳಿಸಿದರು

7. ಸಭೆಯಲ್ಲಿ ಶ್ರೀ.ಗೋಪಾಲ್ ಅಂಬೇಡ್ಕರ್‌ಗುಟ್ಟ ರವರು ಅಂಬೇಡ್ಕರ್‌ಗುಟ್ಟದಲ್ಲಿ ನೀರು ಸರಬರಾಜು ಬುಸ್ಟರ್‌ನ್ನು ಅಳವಡಿಸಿದ್ದು, ಪ್ರಸುತ್ತ 2 ರಸ್ತೆಗಳಲ್ಲಿ ಮಾತ್ರ ನೀರನ್ನು ಒದಗಿಸುತ್ತಿದ್ದು, ಆದರೇ ಈ ಹಿಂದೆ ಬುಸ್ಟರ್ ಇಲ್ಲದೆ ಇರುವಾಗ 06 ರಸ್ತೆಗಳಿಗೆ ನೀರನ್ನು ಒದಗಿಸಿರುತ್ತಾರೆ, ಇದನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ.

   ಸದರಿ ವಿಷಯಕ್ಕೆ ಶ್ರೀ.ರವಿ ಕುಮಾರ್, ಎ.ಇ, ಬಿ.ಬಡ್ಬ್ಯೂ.ಎಸ್.ಎಸ್.ಬಿ ರವರು ನೀರಿನ ಒಳಹರಿವು ಕಡಿಮೆಯಿದ್ದು, ಮುಂದಿನ ದಿನಗಳಲ್ಲಿ ಒಳಹರಿವು ಹೆಚ್ಚಾಗುವುದರಿಂದ ಸಮಸ್ಯೆಯು ಬಗ್ಗೆ ಹರಿಯುವುದಾಗಿ ತಿಳಿಸಿದರು



Scanned with CamScanner

8. ಸಭೆಯಲ್ಲಿ ಡಾ|| ಸಾಯಿ ಕೀರ್ತಿ ರವರು ಡಿ-ಸಿಲ್ವಾ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿಯು ಬಾಕಿಯಿದ್ದು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿದರು.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕೆಲಸ ಪರಿವೀಕ್ಷಕರು ಸದರಿ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಮೇಲ್ಲಾಧಿಕಾರಿಗಳಿಗೆ ಪ್ರಸ್ತಾವಣೆಯನ್ನು ಮಂಡಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

9. ಸಭೆಯಲ್ಲಿ ಶ್ರೀ.ಸಂದೀಪ್ ಆನಿರುಧ್ ರವರು ಎಸ್.ವಿ ರಸ್ತೆ ಮತ್ತು ಇತರೆ ಅಡ್ಡರಸ್ತೆಗಳಲ್ಲಿ ವಿದ್ಯುತ್ ಕಂಬಗಳ ಆಂತರವು ಜಾಸ್ತಿ ಇರುವುದರಿಂದ ಮಧ್ಯದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕೋರಿದರು.

ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಕಾಮಗಾರಿಯ ಕಡತವು ಪ್ರಗತಿಯಲ್ಲಿದ್ದು, ಶೀಘ್ರದಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

10. ಸಭೆಯಲ್ಲಿ ಶ್ರೀ.ಕೃಷ್ಣಮೂರ್ತಿ ಚನ್ನಸಂದ್ರ ರವರು ಚನ್ನಸಂದ್ರ ಮತ್ತು ಇತರೆ ರಸ್ತೆಗಳಲ್ಲಿ Medion ಗಳನ್ನು ಅಳವಡಿಸಲು ಕೋರಿದರು.

ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಶ್ರೀ.ರವಿ, ಸಹಾಯಕ ಅಭಿಯಂತರರು, ರ.ಮೂ.ಸೌ ರವರಿಗೆ ತಿಳಿಸುತ್ತಾ ಟಿ.ಇ.ಸಿ ಶಾಖೆಯ ಅಭಿಯಂತರರಿಗೆ ತಿಳಿಸುವಂತೆ ಸೂಚಿಸಿದರು

11. ಸಭೆಯಲ್ಲಿ ವೈಟ್‌ಫೀಲ್ಡ್ ಪೋಲೀಸ್ ಠಾಣಾ ಅಧಿಕಾರಿಗಳು Emergency Contoral room ಗಳನ್ನು ವಾರ್ಡಿನ 02 ಕಡೆ ಅಳವಡಿಸಬೇಕಾಗಿರುವುದರಿಂದ ಬಿ.ಬಿ.ಎಂ.ಪಿ ವೈಟ್‌ಫೀಲ್ಡ್ ಉಪ ವಿಭಾಗಕ್ಕೆ ಶೀಘ್ರದಲ್ಲಿ ಪತ್ರವನ್ನು ಸಲ್ಲಿಸುವುದಾಗಿ ಹಾಗೂ ಜರೂರುರಾಗಿ ಸ್ಥಳವನ್ನು ಗುರುತಿಸಿಕೊಡಲು ಕೋರಿದರು.

ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ಒಪ್ಪಿಗೆಯನ್ನು ನೀಡಿದರು

12. ಸಭೆಯಲ್ಲಿ ಡಾ|| ಸಾಯಿ ಕೀರ್ತಿ ರವರು ಡಿ-ಸಿಲ್ವಾ ಮತ್ತು ಎಸ್.ವಿ ರಸ್ತೆಗಳಲ್ಲಿ ಕೆಲವು ಅನಧಿಕೃತ ವಾಹನಗಳು ನಿಲುಗಡೆ ಮಾಡುತ್ತಿದ್ದು, ಸದರಿ ವಾಹನಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಕೋರಿದರು.

ಸದರಿ ವಿಷಯಕ್ಕೆ ಎ.ಎಸ್.ಐ ಟ್ರಾಫೀಕ್ ರವರು ತೆರವುಗೊಳಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

13. ಸಭೆಯಲ್ಲಿ ಗೋಪಾಲ ಮತ್ತು ರವಿ_ಅಂಬೇಡ್ಕರ್‌ಗಟ್ಟ ರವರು ಡಿ-ಸಿಲ್ವಾ ರಸ್ತೆಯ ಬಳಿ ಕೆಲವು ದುಷ್ಕರ್ಮಿಗಳು ಡ್ರಗ್ಸ್‌ನ್ನು ಮಾರಾಟ ಮಾಡುತ್ತಿರುವುದಾಗಿ ತಿಳಿಸಿದರು.

ಸದರಿ ವಿಷಯಕ್ಕೆ ಎ.ಎಸ್.ಐ ವೈಟ್‌ಫೀಲ್ಡ್ ಸಿವಿಲ್ ಪೋಲೀಸ್ ಠಾಣಾ ರವರು ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

10/6/2022

(ಎನ್.ವೆಂಕಟೇಶ್)
ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ
ವಾರ್ಡ್ ನಂ: 83 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ



Scanned with CamScanner